ದಿ: 11-02-2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ (ಶ್ರೀ ಟಿ.ಆರ್.ಎಸ್.)**:

2. ದೂರುದಾರರು ಕೈ ಸನ್ನೆ ಮಾಡಿದ ನಂತರ ನಾನು ಮತ್ತು ದೂರುದಾರರು ಡಾ. ಅಂಬೇಡ್ಕರ ಅಭಿವೃದ್ಧಿ ನಿಗಮ ಕಛೇರಿಯ ಒಳಗೆ ಹೋದೆವು. ಅಲ್ಲಿ ಕಛೇರಿಯ ವ್ಯವಸ್ಥಾಪಕರಾದ 1 ನೇ ಆರೋಪಿ ಲಂಚದ ಹಣವನ್ನು ತೆಗೆದುಕೊಂಡರು. ಆ ಹಣವನ್ನು ಅವರು ಟೇಬಲ್ ಡ್ರಾಯರ್ ನಲ್ಲಿ ಇಟ್ಟುಕೊಂಡರು. 1 ನೇ ಆರೋಪಿಯು ಆ ಹಣವನ್ನು ತನ್ನ ಡ್ರೈವರ್ ಆದ 3 ನೇ ಆರೋಪಿಗೆ ಕೊಡಲು ಹೇಳಿದರು. ಅವರು ಹಣವನ್ನು ತೆಗೆದುಕೊಂಡು ಹೋಗುವಾಗ ಕಾಲಕ್ಕೆ ಇನ್ಸಪೆಕ್ಟರ್ ರವರು ತಮ್ಮ ಐ.ಡಿ. ಕಾರ್ಡನ್ನು ತೋರಿಸಿ ನಿಲ್ಲಿಸಿದರು. 3 ನೇ ಆರೋಪಿಯು ಆಗ ಕಛೇರಿಯ ಒಳಗೆ ಹೋದರು. ಅವರಿಗೆ ಲುಂಗಿ ವ್ಯವಸ್ಥೆ ಮಾಡಿ, ಸಿಬ್ಬಂದಿಗಳು 3 ನೇ ಆರೋಪಿಯ ಪ್ಯಾಂಟ್ ನ ಚೆಕ್ ಮಾಡಿದರು. ₹4250/- ಹಣ ಇತ್ತು. ಅದರ ಬಗ್ಗೆ ಮಾಹಿತಿಯನ್ನು ಕೊಡಲು ಕೇಳಿದಾಗ 3 ನೇ ಆರೋಪಿಯು ಸಮಂಜಸವಾದ ಉತ್ತರವನ್ನು ನೀಡಲಿಲ್ಲ. ಆದ್ದರಿಂದ ಮುಂದಿನ ಕ್ರಮವನ್ನು ತೆಗೆದುಕೊಂಡರು.

3. ನಂತರ ಅಲ್ಲಿ 2 ನೇ ಆರೋಪಿಯು ಬಂದರು. ಅವರ ಕೆಲಸ ಏನು ಅಂತ ಕೇಳಿದಾಗ, ಅವರು ವಿಷಯ ನಿರ್ವಾಹಕ ಎಂಬುವುದಾಗಿ ಕಾರ್ಯನಿರ್ವಹಿಸುತ್ತಿದ್ದೇನೆ ಅಂತ ಹೇಳಿದರು. ಅವರ ಮುಂದೆ ಒಬ್ಬ ವ್ಯಕ್ತಿ ಹನುಮಂತಪ್ಪರವರು ಕುಳಿತಿದ್ದರು. ಇನ್ಸಪೆಕ್ಟರ್ ರವರು ಹನುಮಂತಪ್ಪರವರಿಗೆ ಯಾವ ಕೆಲಸದ ಬಗ್ಗೆ ಬಂದಿದ್ದೀರಿ ಅಂತ ಕೇಳಿದರು. ಆಗ ಅವರು ಖಾಸಗಿ ವ್ಯಕ್ತಿ ಕುಳಿತಿದ್ದಾರೆ ಅಂತ ಹೇಳಿದರು. ದೂರುದಾರರಿಗೆ ತೋರಿಸಿ ಆ ಸಾಕ್ಷಿದಾರರಿಗೆ ಈ ವ್ಯಕ್ತಿ ಪರಿಚಯ ಇದೆಯಾ ಅಂತ ಕೇಳಿದರು. 4 ನೇ ಆರೋಪಿಗೆ ದೂರುದಾರರು ಗೊತ್ತಾ ಅಂತ ಇನ್ಸಪೆಕ್ಟರ್ ರವರು ವಿಚಾರಿಸಿದರು. ಆಗ ಹನುಮಂತಪ್ಪರವರು ಹೇಗೆ ಅಂತ ಕೇಳಿದ್ದಕ್ಕೆ , ಆಗ ದೂರುದಾರರು ತನ್ನ ಸಹೋದರ ಚಾಸಾ-4 ಅಂತ

ಹೇಳಿದರು. ₹70,000/- ಆಡು ಸಾಕಾಣಿಕೆ ಸಹಾಯ ಧನ ಮಂಜೂರು ಆಗಿತ್ತು ಅಂತ ಹೇಳಿದರು. ಆ ಸಹಾಯಧನವನ್ನು ಮಂಜೂರು ಮಾಡಲು ₹3,000/- ಹಣ ಕೇಳಿದರು. 1 ನೇ ಆರೋಪಿಗೆ ₹2000/-, 2 ನೇ ಆರೋಪಿಗೆ ₹500/- ಗೆ ಮತ್ತು ಹೇಮಾವತಿಗೆ ₹500/- ಕೊಡಬೇಕು ಅಂತ ತಿಳಿಸಿದರು. ಅದರಂತೆ ಅವರಿಗೆಲ್ಲಾ ಹಣ ಕೊಟ್ಟರು. ಹೇಮಾವತಿರವರಿಗೆ ಕೊಡಬೇಕಾದ ₹500/- ಹಣವನ್ನು ಅವರ ಪರವಾಗಿ 2 ನೇ ಆರೋಪಿಯು ಇಸಿದುಕೊಂಡರು. ನಂತರ ಅಲ್ಲಿ ಪೊಲೀಸರು ಮಹಜರ ಮಾಡಿದರು. ನಂತರ ನನ್ನನ್ನು ಆಚೆ ಕಳುಹಿಸಿದರು. ಆ ಸಮಯದಲ್ಲಿ ಮಾಡಿದ ಪಂಚನಾಮೆಯನ್ನು ಈಗ ನೋಡುತ್ತಿದ್ದು, ನಿಪಿ-2 ಅಂತ, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಅಂತ ಗುರುತಿಸಲಾಯಿತು. ಅದರಲ್ಲಿ ಪಿರ್ಯಾದಿದಾರರು, ಚಾಸಾ-3 ಸುನಂದಮ್ಮರವರು ಸಹಿ ಮಾಡಿದ್ದೇವೆ.

(ಈ ಹಂತದಲ್ಲಿ ಸಾಕ್ಷಿಯು ತನ್ನ ಹೇಳಿಕೆಗೆ ವ್ಯತಿರಿಕ್ತವಾಗಿ ಸಾಕ್ಷ್ಯವನ್ನು ಕೊಡುತ್ತಿರುವ ಕಾರಣ ಅವರನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಮಾನ್ಯ ಸರ್ಕಾರಿ ಅಭಿಯೋಜಕರು ಕೋರಿರುತ್ತಾರೆ. ವಾದ ಕೇಳಿ ಅನುಮತಿ ಕೊಡಲಾಯಿತು.)

**ಪಾಟೀ ಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ**:

4. ಲೋಕಾಯುಕ್ತ ಪೊಲೀಸರು ನನ್ನನ್ನು ಮತ್ತು ಚಾಸಾ-3 ರವರನ್ನು ಕರೆದಾಗ ಪೊಲೀಸ್ ಠಾಣೆಗೆ ಹೋಗಿ ನಾವು ಪೊಲೀಸರನ್ನು ಭೇಟಿ ಮಾಡಿದೆವು ಅಂದರೆ ನಿಜ. ಅಲ್ಲಿ ನಮಗೆ ದೂರುದಾರರನ್ನು ಪರಿಚಯ ಮಾಡಿಕೊಟ್ಟರು ಅಂದರೆ ನಿಜ. ಅಲ್ಲಿ ದೂರುದಾರರು ತನ್ನ ಅಣ್ಣ ಅಂಬೇಡ್ಕರ ಅಭಿವೃದ್ಧಿ ನಿಗಮರವರಿಗೆ ಆಡು ಸಾಕಾಣಿಕೆ ಸಾಲ ಕೇಳಿದ್ದು, ಸಾಲ ಮಂಜೂರಾಗಿದ್ದು ಆ ಹಣವನ್ನು ಕೊಡಲು ಲಂಚದ ಬೇಡಿಕೆ ಇಟ್ಟಿದ್ದರು ಅಂತ ತಿಳಿಸಿದರು ಅಂದರೆ ನಿಜ. ಲಂಚದ ಹಣವನ್ನು ಕೊಡಲು ಇಚ್ಛೆ ಇರಲಿಲ್ಲ ಆದ್ದರಿಂದ ದೂರನ್ನು ಕೊಡಲು ಬಂದಿರುವುದಾಗಿ ತಿಳಿಸಿದರು ಅಂದರೆ ನಿಜ. ಅದನ್ನು

ಖಚಿತಪಡಿಸಿಕೊಳ್ಳಲು ದೂರುದಾರರಿಗೆ Voice recorder ನ್ನು ಕಳುಹಿಸಿಕೊಟ್ಟಿದ್ದರು ಅಂದರೆ ನಿಜ. ಆ Voice recorder ನಲ್ಲಿ ಆರೋಪಿಯು ಹೇಳಿದ ಹಣದ ಬೇಡಿಕೆ ರೆಕಾರ್ಡ್ ಆಗಿತ್ತು ಅಂದರೆ ನಿಜ. ಆ ರೆಕಾರ್ಡ್‌ನ್ನು ನಮಗೆ ಕೇಳಿಸಿದರು ಅಂದರೆ ನಿಜ. ಅದಕ್ಕಾಗಿ ಪಂಚ ಸಾಕ್ಷ್ಯದಾರರಾಗಿ ಸಹಕರಿಸಲು ನಮಗೆ ಕೇಳಿದರು ಅಂದರೆ ನಿಜ. ಲೋಕಾಯುಕ್ತ ಕಛೇರಿಯಲ್ಲಿ Voice recorder ನಲ್ಲಿ ಕೇಳಿಸಿದ ಸಂಭಾಷಣೆಯನ್ನು ಸಿಡಿಯಲ್ಲಿ transfer ಮಾಡಿದರು ಅಂದರೆ ನಿಜ. ಆ ಸಿಡಿಯ ಮೇಲೆ Trap ಪೂರ್ವದ ಸಂಭಾಷಣೆ ಸಿಡಿ ಅಂತ ಬರೆದರು ಅಂದರೆ ನಿಜ. ಅದನ್ನು ಖಾಕಿ ಬಣ್ಣದ ಪೇಪರ್ ನಲ್ಲಿ ಬರೆದು AZ ಅಂತ ಸೀಲ್ ಮಾಡಿದರು ಅಂದರೆ ನಿಜ.

5. ನಂತರ ಲೋಕಾಯುಕ್ತ ಇನ್ಸಪೆಕ್ಟರ್ ರವರು ಚಾಸಾ-14 ರವರನ್ನು ನಮಗೆ ಪರಿಚಯ ಮಾಡಿಸಿದರು ಅಂದರೆ ನಿಜ. ಅಲ್ಲಿ ಗಾಡ್ರೇಜ್ ಬೀರುವಿನಲ್ಲಿದ್ದ ಎರಡು ಪ್ಲಾಸ್ಟಿಕ್ ಬಾಟಲನ್ನು ತೆಗೆದರು, ಒಂದರಲ್ಲಿ ಫಿನಾಪ್ತಿಲಿನ ಪುಡಿ ಮತ್ತು ಇನ್ನೊಂದರಲ್ಲಿ ಸೋಡಿಯಂ ಕಾರ್ಬೊನೆಟ್ ಅಂತ ಹೇಳಿದರು, ನಾನು ಆ ಬಾಟಲಿಯ ಮೆಲಿನ ಹೆಸರನ್ನು ಓದಿ ಖಚಿತ ಮಾಡಿಕೊಂಡೆ ಅಂದರೆ ನಿಜ. ಆಗ ಲೋಕಾಯುಕ್ತ ಇನ್ಸಪೆಕ್ಟರ್ ರವರು ಲಂಚದ ಹಣವನ್ನು ತೆಗೆದುಕೊಂಡು ಬರಲು ಹೇಳಿದರು ಅದರಂತೆ ದೂರುದಾರರು ಹಣ ತೆಗೆದುಕೊಂಡು ಬಂದರು ಅಂದರೆ ನಿಜ. ಆ ಹಣದಲ್ಲಿ 500 ಮುಖ ಬೆಲೆಯ 4 ನೋಟುಗಳು, 100 ರೂಪಾಯಿ 10 ನೋಟುಗಳು ಇದ್ದವು ಅಂದರೆ ನಿಜ. ಆ ಮುಖ ಬೆಲೆಯ ನೋಟುಗಳ ಮೇಲೆ ಇದ್ದಂತಹ ನಂಬರಗಳನ್ನು ಬರೆದುಕೊಂಡರು ಅಂದರೆ ನಿಜ. ಚಾಸಾ-14 ರವರು ಸದರಿ ನೋಟುಗಳಿಗೆ ಫಿನಾಪ್ತಿಲಿನ್ ಪುಡಿಯನ್ನು ಸವರಿದರು ಅಂದರೆ ನಿಜ. ನಂತರ ಚಾಸಾ-3 ರವರಿಗೆ ಹಣವನ್ನು ಎಣಿಕೆ ಮಾಡಿ ದೂರುದಾರರ ಅಂಗಿಯ ಜೇಬಿನಲ್ಲಿ ಹಣವನ್ನು ಇಡಲು ಹೇಳಿದರು ಅಂದರೆ ನಿಜ. ಹೇಮಾವತಿಯವರಿಗೆ ಕೊಡಬೇಕಾದ ಹಣವನ್ನು ದೂರುದಾರರ ಪ್ಯಾಂಟ್ ನ ಬಲ ಜೇಬಿನಲ್ಲಿ

ಇಡಲು ಹೇಳಿದರು ಅಂದರೆ ನಿಜ. ಅದೇ ರೀತಿ 2 ನೇ ಆರೋಪಿಗೆ ಕೊಡಬೇಕಾದ ಹಣವನ್ನು ದೂರುದಾರರ ಪ್ಯಾಂಟ್ ನ ಎಡ ಜೇಬಿನಲ್ಲಿ ಇಡಲು ಹೇಳಿದರು ಅಂದರೆ ನಿಜ.

6. ನಂತರ ಚಾಸಾ-3 ರವರು ದೂರುದಾರರ ಅಂಗ ಶೋಧನೆ ಮಾಡಿದಾಗ ಪ್ಯಾಂಟ್ ನ ಜೇಬಿನಲ್ಲಿ ₹200/- ಇತ್ತು ಅದರ ಬಗ್ಗೆ ವಿಚಾರಿಸಿದಾಗ, ಅವರು ತನ್ನ ಖರ್ಚಿಗೆ ಇಟ್ಟುಕೊಂಡಿದ್ದೇನೆ ಅಂತ ಹೇಳಿದರು ಅಂದರೆ ನಿಜ. ಆ ಹಣವನ್ನು ಚಾಸಾ-3 ರವರು ದೂರುದಾರರಿಗೆ ಹಿಂದಿನ ಜೇಬಿನಲ್ಲಿ ಇಟ್ಟುಕೊಳ್ಳಲು ಹೇಳಿದರು ಅಂದರೆ ನಿಜ. ಈ ₹200/- ಹೊರತು ಪಡಿಸಿ ಬೇರೆ ಹಣ ಇಲ್ಲ ಅಂತ ದೂರುದಾರರ ಅಂಗ ಶೋಧನೆ ಮಾಡಿ ಖಚಿತಪಡಿಸಿಕೊಂಡರು ಅಂದರೆ ನಿಜ. ದುಡ್ಡನ್ನು ನೇರವಾಗಿ ಇಸಿದುಕೊಳ್ಳುವುದಿಲ್ಲ ಅಂತ ಕವರ್ ನಲ್ಲಿ ಹಾಕಿ ಕೊಡಲು 03 ಕವರ್ ನ್ನು ಲೋಕಾಯುಕ್ತ ಪೊಲೀಸರು ದೂರುದಾರರಿಗೆ ಕೊಟ್ಟರು ಅಂದರೆನಿಜ. ಆ ಕವರ್ ಗಳಿಗೂ ಫಿನಾಫ್ತಿಲಿನ್ ಪುಡಿಯನ್ನು ಸವರಿದರು ಅಂದರೆ ನಿಜ. ಕವರ್ ಗಳನ್ನು ದೂರುದಾರರ ಪ್ಯಾಂಟ್ ನ ಹಿಂದಿನ ಜೇಬಿನಲ್ಲಿ ಇಟ್ಟುಕೊಂಡರು ಅಂದರೆ ನಿಜ.

7. ನಂತರ ಲೋಕಾಯುಕ್ತ ಪೊಲೀಸರು ಚಾಸಾ-18 ರವರನ್ನು ಪರಿಚಯ ಮಾಡಿಸಿದರು ಅಂದರೆ ನಿಜ. ಚಾಸಾ-18 ರವರು ಒಂದು ಗಾಜಿನ ಬಟ್ಟಲಿನಲ್ಲಿ ಸೋಡಿಯಂ ಕಾರ್ಬೊನೆಟ್ ನ್ನು ಡಿಸ್ಟಿಲ್ ವಾಟರ್ ಗೆ ಹಾಕಿ ದ್ರಾವಣವನ್ನು ತಯಾರಿಸಿದರು ಅಂದರೆ ನಿಜ. ಆ ದ್ರಾವಣದ ಸ್ವಲ್ಪ ಭಾಗವನ್ನು ಎರಡು ಖಾಲಿ ಬಾಟಲಿಗಳಲ್ಲಿ ಹಾಕಿ ಸಂಗ್ರಹಿಸಿ ಮುಚ್ಚಳವನ್ನು ಹಾಕಿ ಸೀಲ್ ಮಾಡಿದರು ಅಂದರೆ ನಿಜ. ನಂತರ ಲೋಕಾಯುಕ್ತ ಪೊಲೀಸರು ನಂತರ ಚಾಸಾ-3 ರವರ ಕೈಗಳನ್ನು ಆ ದ್ರಾವಣದಲ್ಲಿ ಅದ್ದಿಸಿದಾಗ ಅದು ಗುಲಾಬಿ ಬಣ್ಣಕ್ಕೆ ಪರಿವರ್ತನೆಯಾಗಿರುತ್ತದೆ ಅಂದರೆ ನಿಜ. ಆಗ ಪೊಲೀಸರು ಈ ರೀತಿ ಫಿನಾಫ್ತಿಲಿನ್ ಪುಡಿಯನ್ನು ಸವರಿದ ನೋಟುಗಳನ್ನು ಮುಟ್ಟಿ ನಂತರ ಕೈಯನ್ನು ಸೋಡಿಯಂ ಕಾರ್ಬೊನೆಟ್

ದ್ರಾವಣದಲ್ಲಿ ಅದ್ದಿಸಿದಾಗ ಗುಲಾಬಿ ಬಣ್ಣಕ್ಕೆ ಪರಿವರ್ತನೆಯಾಗುತ್ತದೆ ಅಂತ ಆ ರಾಸಾಯನಿಕ ಪ್ರಕ್ರಿಯೆ ಬಗ್ಗೆ ತಿಳಿಸಿದರು ಅಂದರೆ ನಿಜ. ಗುಲಾಬಿ ಬಣ್ಣಕ್ಕೆ ಪರಿವರ್ತನೆಯಾಗಿರುವಂತಹ ದ್ರಾವಣವನ್ನು ಎರಡು ಬಾಟಲಿಗಳಲ್ಲಿ AZ ಅಂತ ಸೀಲ್ ಮಾಡಿದರು ಅಂದರೆ ನಿಜ. ಲೇಬಲ್ ಗಳ ಮೇಲೆ ಎಲ್ಲಾ ಬರೆದು ಜಪ್ತು ಮಾಡಿದರು ಅಂದರೆ ನಿಜ. AZ ಇರುವಂತಹ ಸೀಲ್ ನ್ನು ನಂತರ ನನ್ನ ವಶಕ್ಕೆ ಕೊಟ್ಟು ಹಾಗೂ ತನಿಖೆಗೆ ಹಾಜರುಪಡಿಸಲು ಹೇಳಿದರು ಅಂದರೆ ನಿಜ.

8. ಇನ್ಸಪೆಕ್ಟರ್ ರವರು ದೂರುದಾರರಿಗೆ Voice Recorder ನ್ನು ಆನ್ ಮಾಡಿಕೊಂಡು ಆ ಕಛೇರಿಗೆ ಹೋಗಬೇಕು ಅಂತ ತಿಳಿಸಿದರು ಅಂದರೆ ನಿಜ. ನನಗೆ ಮತ್ತು ದೂರುದಾರರಿಗೆ ಮೊದಲು ಕಛೇರಿಯ ಒಳಗಡೆ ಹೋಗಿ, ಆರೋಪಿತರು ಬಳಿ ಹೋಗಿ ಕೆಲಸದ ಬಗ್ಗೆ ಕೇಳಬೇಕು ಮತ್ತು ಆ ಕೆಲಸವನ್ನು ಮಾಡಿಕೊಡಲು ಹಣದ ಬೇಡಿಕೆಯನ್ನು ಇಟ್ಟಿದ್ದಲ್ಲಿ ದೂರುದಾರರ ಅಂಗಿ ಜೇಬಿನಲ್ಲಿ ಇಟ್ಟಿದ್ದ ₹2000/- ಹಣವನ್ನು ಮತ್ತು ಹೇಮಾವತಿಯವರಗೆ ಪ್ಯಾಂಟಿನ ಬಲ ಜೇಬಿನಲ್ಲಿದ್ದಂತಹ ₹500/- ಹಣ ಕೊಡಬೇಕುಮತ್ತು 2 ನೇ ಆರೋಪಿಗೆ ಪ್ಯಾಂಟಿನ ಎಡ ಜೇಬಿನಲ್ಲಿದ್ದಂತಹ ₹500/- ಹಣ ಕೊಡಬೇಕು ಅಂತ ಹೇಳಿದರು ಅಂದರೆ ನಿಜ. ಲಂಚದ ಹಣವನ್ನು ಅವರು ಪಡೆದ ನಂತರ ಹೊರಗಡೆ ಬಂದು ಕೈಯನ್ನು ತಲೆಗೆ ಸವರಿ ಸನ್ನೆ ಮಾಡಬೇಕು ಅಂತ ತಿಳಿಸಿದರು ಅಂದರೆ ನಿಜ. ಕವರ್ ನಲ್ಲಿ ಹಾಕಿ ಕೊಡಬೇಕು ಅಂತ ಕೇಳಿದ್ದಲ್ಲಿ ಪ್ಯಾಂಟ್ ನ ಹಿಂದಿನ ಜೇಬಿನಲ್ಲಿದ್ದಂತಹ ಕವರ್ ನಲ್ಲಿ ಹಾಕಿ ಕೊಡಬೇಕು ಅಂತ ಹೇಳಿದ್ದರು ಅಂದರೆ ನಿಜ. ನಾನು ದೂರುದಾರರೊಂದಿಗೆ ಇದ್ದು ಅವರು ಏನು ಮಾತನಾಡುತ್ತಾರೆ ಅಂತ ಕೇಳಿಸಿಕೊಳ್ಳಬೇಕು ಅಂತ ಹೇಳಿದರು ಅಂದರೆ ನಿಜ. ಒಂದಾನೊಂದು ವೇಳೆ ನಾನು ಮಾತನಾಡಬೇಕು ಎನ್ನುವ ಪ್ರಸಂಗ ಬಂದಲ್ಲಿ ನಾನು ದೂರುದಾರರ ಸಂಬಂಧಿ ಎಂಬುವುದಾಗಿ ತಿಳಿಸಬೇಲಕು ಅಂತ ಸೂಚನೆ ನೀಡಿದರು ಅಂದರೆ ನಿಜ. ಘಟನೆ ಏನೇನು ನಡೆಯಿತು ಅಂತ ಇನ್ಸಪೆಕ್ಟರ್ ರವರಿಗೆ ಹೇಳಬೇಕು ಅಂತ

ಹೇಳಿದರು ಅಂದರೆ ನಿಜ. ವಿಡಿಯೋಗ್ರಾಫಿ ಮಾಡಲು ಚಾಸಾ-16 ರವರಿಗೆ ಹೇಳಿದರು, ಪೋಟೋಗ್ರಾಫ್ ಮಾಡಲು ಚಾಸಾ-17 ರವರಿಗೆ ವಹಿಸಿದ್ದರು ಅಂದರೆ ನಿಜ. 51 ಪೋಟೋಗಳನ್ನು ಈಗ ನೋಡುತ್ತಿದ್ದು, ಸಾಕ್ಷಿದಾರರು ಅವುಗಳನ್ನು ನೋಡಿ ಗುರುತಿಸುತ್ತಾರೆ. ಅವುಗಳನ್ನು ಕ್ರಮವಾಗಿ ನಿಪಿ-3 ರಿಂದ 53 ಅಂತ ಗುರುತಿಸಲಾಯಿತು. ಪೊಲೀಸರು ಧ್ರಾವಣದ ಬಾಟಲುಗಳು ಮತ್ತು ಸೀಲ್ ನ್ನು ಭದ್ರತೆಪಡಿಸಿದರು ಅಂದರೆ ನಿಜ. ವಹಿಸುವಿಕೆ ಪಂಚನಾಮೆಗೆ ಬಳಸಿದ ಸೀಲ್ ಮಾಡಿದ ಎರಡು ಗಾಜಿನ ಬಾಟಲುಗಳನ್ನು ಸಾಕ್ಷಿಗೆ ತೋರಿಸಲಾಯಿತು. ಸಾಕ್ಷಿ ಅವುಗಳನ್ನು ನೋಡಿ ಗುರುತಿಸುತ್ತಾರೆ. ಎರಡು ಗಾಜಿನ ಬಾಟಲುಗಳನ್ನು ಮು.ಮಾ.1 ಮತ್ತು 2 ಅಂತ ಗುರುತಿಸಲಾಯಿತು.

9. ನಂತರ ಫಿನಾಪ್ತಿನ್ ಪುಡಿಯನ್ನು ನಾವು ಮುಟ್ಟಿದ್ದರಿಂದ ನಾವೆಲ್ಲರೂ ಕೈಗಳನ್ನು ತೊಳೆದುಕೊಂಡೆವುಅಂದರೆ ನಿಜ. ಲೋಕಾಯುಕ್ತ ಕಛೇರಿಯಲ್ಲಿ ವಹಿಸುವಿಕೆ ಪಂಚನಾಮೆಯನ್ನು ಬೆಳಿಗ್ಗೆ 7.30 ರಿಂದ 10.30 ಗಂಟೆಯವರೆಗೆ ಮಾಡಿದರು ಅಂದರೆ ನಿಜ. ಆ ಬಗ್ಗೆ ಪೊಲೀಸರು ಮಹಜರ ಮಾಡಿ ನಮ್ಮ ಸಹಿ ಪಡೆದರು ಅಂದರೆ ನಿಜ.

Spl. PP ರವರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿರುವುದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.